# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 30.03.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2011-12ನೇ ಆರ್ಥಿಕ ವರ್ಷದಿಂದ ಆಸ್ತಿ ತೆರಿಗೆಯನ್ನು ಪರಿಷ್ಕರಣೆ ಮಾಡಬೇಕಾಗಿದ್ದು, ಯಾವುದೇ ಹೆಚ್ಚಳ ಇಲ್ಲದೆ ಈ ಹಿಂದೆ ಇದ್ದ ದರಗಳನ್ನೇ ಮುಂದುವರೆಸಿ ಆಸ್ತಿ ತೆರಿಗೆಯನ್ನು ಪಾವತಿಸಲು ನಗರ ಪಾಲಿಕೆ ಸಭೆಯು ನಿರ್ಣಯಿಸಿದ ಹಿನ್ನೆಲೆಯಲ್ಲಿ 2011-12ನೇ ಸಾಲಿನ ಆಸ್ತಿ ತೆರಿಗೆ ಪಾವತಿಸಲು ಪಾಲಿಕೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ತೆರಿಗೆದಾರರು 2011-12ನೇ ಸಾಲಿನ ಆಸ್ತಿ ತೆರಿಗೆಯನ್ನು 30ನೇ ಏಪ್ರಿಲ್ 2011ರ ಒಳಗೆ ಸಂಪೂರ್ಣವಾಗಿ ಪಾವತಿಸಿ; 5% ರಿಯಾಯಿತಿಯನ್ನು ಪಡೆಯಬಹುದಾಗಿರುತ್ತದೆ.

ಅಥವಾ 2 ಕಂತುಗಳಲ್ಲಿ ಪಾವತಿಸಿ, ಈ ಕೆಳಕಂಡ ರಿಯಾಯಿತಿ ಪಡೆಯಬಹುದು.

- ಮೊದಲ ಅರ್ಧ ಕಂತು : ಬಡ್ಡಿ ರಹಿತವಾಗಿ 30ನೇ ಮೇ 2011ರೊಳಗೆ
- ದ್ವಿತೀಯ ಅರ್ಧ ಕಂತು : ಬಡ್ಡಿ ರಹಿತವಾಗಿ 1ನೇ ಅಕ್ಟೋಬರ್ 2011 ರಿಂದ 29ನೇ ನವೆಂಬರ್ 2011ರೊಳಗೆ
- ವಿಳಂಬ ಪಾವತಿಗೆ ತೆರಿಗೆ ಮೊತ್ತದ ಮೇಲೆ ಮಾಹೆಯಾನ ಶೇ.2ರಷ್ಟು ಬಡ್ಡಿಯನ್ನು ಪಾವತಿಸಬೇಕು.

2008-09 ರಿಂದ 2010-11ನೇ ಸಾಲಿನ ಆಸ್ತಿ ತೆರಿಗೆಯನ್ನು ಪಾವತಿಸಿದವರು 2011-12ನೇ ಸಾಲಿನ ತೆರಿಗೆಯನ್ನು ಸಂಬಂಧಪಟ್ಟ ಸಹಾಯ ಕೇಂದ್ರಗಳಲ್ಲಿ ಹಾಗೂ ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿಗಳಲ್ಲಿ ಡೆಬಿಟ್/ಕ್ರೆಡಿಟ್ ಕಾರ್ಡ್ ಮೂಲಕ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

2011-12ನೇ ಸಾಲಿನ ಹಣಕಾಸಿನ ವರ್ಷ ದಿನಾಂಕ: 01.04.2011 ರಿಂದ ಪ್ರಾರಂಭವಾಗಲಿದ್ದು, ನಗರದ ನಾಗರಿಕರು ತೆರಿಗೆ ಪಾವತಿಸುವ ಸಲುವಾಗಿ ಈ ಕೆಳಕಂಡ ಮಾಹಿತಿಯನ್ನು ನೀಡಲಾಗಿದೆ:-

- 2011-12ನೇ ಸಾಲಿಗೆ ಆಸ್ತಿ ತೆರಿಗೆ ಪಾವತಿ ಮಾಡಲು ಅಗತ್ಯವಾದ ಸ್ವಯಂ ಘೋಷಣಾ ಆಸ್ತಿ ತೆರಿಗೆ ನಮೂನೆಗಳನ್ನು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರ ಪಾವತಿಸುವ ಅರ್ಜಿ ನಮೂನೆಯನ್ನು ಮಹಾನಗರ ಪಾಲಿಕೆಯ ಎಲ್ಲಾ ಸಹಾಯ ಕೇಂದ್ರಗಳಲ್ಲೂ ಮತ್ತು ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿಗಳಲ್ಲೂ ಲಭ್ಯವಿರುತ್ತದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ದಿನಾಂಕ: 18.03.2011ರ ನಿರ್ಣಯದ ಪ್ರಕಾರ ಆಸ್ತಿ ತೆರಿಗೆ ಪರಿಷ್ಕರಣೆಯನ್ನು ತಡೆಹಿಡಿದಿರುವ ಹಿನ್ನಲೆಯಲ್ಲಿ 2011-12 ಮತ್ತು 2012-13ರ ಅವಧಿಗೆ ಕಟ್ಟಡ ಸವಕಳಿಯನ್ನು ಪಡೆಯಲು ಅವಕಾಶವಿರುವುದಿಲ್ಲ. ಆದ್ದರಿಂದ ಹಿಂದಿನ ಸಾಲಿನಲ್ಲಿ ಪಾವತಿಸಿದ ಆಸ್ತಿ ತೆರಿಗೆಯನ್ನೇ ಪ್ರಸ್ತುತ ಸಾಲಿನಲ್ಲೂ ಪಾವತಿ ಮಾಡಬೇಕಾಗಿರುತ್ತದೆ.
- ಘನತ್ಯಾಜ್ಯ ವಸ್ತು ಉಪಕರವನ್ನು ವಾರ್ಷಿಕ ಅಥವಾ ಅರ್ಧ ವಾರ್ಷಿಕ ತೆರಿಗೆಗೆ ಅನುಗುಣವಾಗಿ ಲೆಕ್ಕಾಚಾರ ಮಾಡಿ ಆಸ್ತಿ ತೆರಿಗೆ ಜೊತೆಯಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು.
- ಇತ್ತೀಚೆಗೆ ತಿರಸ್ಕೃತ ಚೆಕ್ಕುಗಳ ಸಂಖ್ಯೆ ಜಾಸ್ತಿ ಆಗಿರುವುದರಿಂದ ಆಸ್ತಿ ತೆರಿಗೆ ರೂ. 15000 ಮೇಲ್ಪಟ್ಟು ಪಾವತಿಸುವ ತೆರಿಗೆದಾರರು ಡಿಡಿ/ಪೇ ಆರ್ಡರ್ ಮುಖಾಂತರ ಪಾವತಿ ಮಾಡುವವರಿಗೆ ಕೂಡಲೇ ಅಧಿಕೃತ ರಸೀದಿ ನೀಡಲಾಗುವುದು ಅಥವಾ ಚೆಕ್ ಮೂಲಕ ಪಾವತಿಸಿದ್ದಲ್ಲಿ ಚೆಕ್ ನಗದೀಕರಣದ ನಂತರ ಅಧಿಕೃತ ರಸೀದಿಯನ್ನು ಪಡೆಯತಕ್ಕದ್ದು.
- 2008-09 ರಿಂದ 2010-11ನೇ ವರ್ಷಗಳಿಗೆ ತೆರಿಗೆ ಪಾವತಿ ಮಾಡದೇ ಇರುವ ಸ್ವತ್ತುಗಳಿಗೆ ಮಹಾನಗರ ಪಾಲಿಕೆ ಸಿಬ್ಬಂದಿ ಈಗಾಗಲೇ ತೆರಿಗೆ ನಿರ್ಧರಣೆ ಮಾಡಿ ವಿಶೇಷ ಸೂಚನಾ ಪತ್ರಗಳನ್ನು ಜಾರಿಗೊಳಿಸಲಾಗಿದೆ. ಸದರಿ ಆಸ್ತಿಯ ಮಾಲೀಕರು ವಿಶೇಷ ಸೂಚನಾ ಪತ್ರದ ಅನುಸಾರ ಆಸ್ತಿ ತೆರಿಗೆಯನ್ನು ಪಾವತಿ ಮಾಡತಕ್ಕದ್ದು, ನಂತರ 2011-12ನೇ ಸಾಲಿನ ಆಸ್ತಿ ತೆರಿಗೆಯನ್ನು ಸ್ವೀಕರಿಸಲಾಗುವುದು.
- ನಗರದ ಆಸ್ತಿದಾರರು 2011-12ನೇ ಸಾಲಿಗೆ ದಿನಾಂಕ: 01.04.2011 ರಿಂದ ದಿನಾಂಕ: 30.04.2011ರ ವರೆಗೆ ತಮ್ಮ ಸ್ವತ್ತಿನ ಆಸ್ತಿ ತೆರಿಗೆ ಪಾವತಿ ಮಾಡಿ ಶೇಕಡ 5 ರಷ್ಟು ರಿಯಾಯಿತಿ ಪಡೆಯಬಹುದಾಗಿದೆ. ಅನಂತರ ವರ್ಷಾರಂಭದಿಂದ 60 ದಿವಸಗಳ ನಂತರ ಪಾವತಿ ಮಾಡುವವರು ಮಾಹೆಯಾನ ಶೇಕಡ 2 ರಷ್ಟು ಬಡ್ಡಿ ಸೇರಿಸಿ ಆಸ್ತಿ ತೆರಿಗೆ ಪಾವತಿ ಮಾಡಬೇಕಾಗುತ್ತದೆ. 2011-12ನೇ ಸಾಲಿನಲ್ಲಿ ಆಸ್ತಿ ತೆರಿಗೆ ಪಾವತಿ ಮಾಡುವುದರ ಜೊತೆಗೆ ಘನತ್ಯಾಜ್ಯ ವಸ್ತು ನಿರ್ವಹಣಾ ಉಪಕರವನ್ನೂ ಸಹ ಪಾವತಿಸುವುದು ಕಡ್ಡಾಯವಾಗಿರುತ್ತದೆ.
- ತೆರಿಗೆದಾರರು 2011-12ನೇ ಸಾಲಿಗೆ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯಲ್ಲಿ ಆಸ್ತಿ ತೆರಿಗೆ ಪಾವತಿಸುವವರು ಕಡ್ಡಾಯವಾಗಿ 2008-09ನೇ ಸಾಲಿನಲ್ಲಿ ಸಲ್ಲಿಸಲಾದ ಆಸ್ತಿ ತೆರಿಗೆ ಘೋಷಣೆಯ ಅರ್ಜಿ ಸಂಖ್ಯೆ/ಪಿಐಡಿ ಸಂಖ್ಯೆಯನ್ನು ಪ್ರಸ್ತುತ ಸಾಲಿನ ಘೋಷಣೆಯಲ್ಲಿ ನಮೂದಿಸತಕ್ಕದ್ದು.
- ಆಸ್ತಿ ತೆರಿಗೆದಾರರ ಅನುಕೂಲಕ್ಕಾಗಿ ಘನತ್ಯಾಜ್ಯ ವಸ್ತು ಉಪಕರವನ್ನು ಆಸ್ತಿ ತೆರಿಗೆ ಜೊತೆಯಲ್ಲಿಯೇ ಒಟ್ಟಾಗಿ (ಡಿಡಿ/ಚೆಕ್/ಪೇ ಆರ್ಡರ್, ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್) ಸ್ವೀಕರಿಸಲಾಗುತ್ತಿದ್ದು, ಸದರಿ ಉಪಕರವನ್ನು ಪ್ರತ್ಯೇಕವಾಗಿ ಲೆಕ್ಕ ಇಡಲಾಗುವುದು.

ಮಹಾನಗರದ ಆಸ್ತಿ ಮಾಲೀಕರು/ಅನುಭವದಾರರು ಸಕಾಲದಲ್ಲಿ ತೆರಿಗೆ ಪಾವತಿ ಮಾಡಿ, ನಗರದ ಅಭಿವೃದ್ಧಿಗೆ ಸಹಕರಿಸಲು ಪಾಲಿಕೆ ಆಯುಕ್ತರು ಕೋರಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 30.03.2011**

ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.168ರ ಪಟ್ಟಾಭಿರಾಮನಗರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 4ನೇ ಮುಖ್ಯರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು ಇಲ್ಲಿ ದಿನಾಂಕ: 30.03.2011 ರಂದು ಘನತ್ಯಾಜ್ಯ ಸಂಸ್ಕರಣಾ ಕೇಂದ್ರ ಶಂಕುಸ್ಥಾಪನಾ ಮಹೋತ್ಸವವನ್ನು ನೆರವೇರಿಸಲಾಯಿತು. ಇದರ ಅಧ್ಯಕ್ಷತೆಯನ್ನು ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಿ.ಎನ್.ವಿಜಯಕುಮಾರ್ ರವರು ವಹಿಸಿದ್ದರು. ಶಂಕುಸ್ಥಾಪನೆಯನ್ನು ಪೂಜ್ಯ ಮಹಾಪೌರರಾದ ಶ್ರೀ ಎಸ್.ಕೆ. ನಟರಾಜ್ ರವರು ನೆರವೇರಿಸಿದರು. ಹಾಗೂ ಈ ಕಾರ್ಯಕ್ರಮದಲ್ಲಿ ಜಯನಗರ ವಿಧಾನಸಭಾ ಕ್ಷೇತ್ರದ ಎಲ್ಲಾ ನಗರ ಸಭಾ ಸದಸ್ಯರು, ವಾರ್ಡ್‌ನ ಹಿರಿಯ ನಾಗರಿಕರು ಮತ್ತು ಬಡಾವಣೆಯ ನಿವಾಸಿಗಳು ಪಾಲ್ಗೊಂಡಿದ್ದರು.

ಘನತ್ಯಾಜ್ಯವನ್ನು ವಿಲೇವಾರಿ ಮತ್ತು ಸಾಗಾಣಿಕೆ ಮಾಡುವ ಕಾರ್ಯವು ಸುಲಲಿತವಾಗುವಂತೆ ಸಂಸ್ಕರಣಾ ಘಟಕವನ್ನು ತೆರೆಯುವುದು ಸೂಕ್ತ ಪರಿಹಾರವೆಂದು ಮನಗಂಡು ವಾರ್ಡ್ ನಂ.168ರ ಪಟ್ಟಾಭಿರಾಮನಗರದಲ್ಲಿ ಪ್ರಥಮವಾಗಿ ಘನತ್ಯಾಜ್ಯ ಸಂಸ್ಕರಣಾ ಕೇಂದ್ರವನ್ನು ರೂ.23.50 ಲಕ್ಷಗಳ ಅಂದಾಜಿನಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಯಿತು. ಈ ಘಟಕದಲ್ಲಿ ಜಯನಗರ ಮಾರುಕಟ್ಟೆ, ಜಯನಗರ ಬಡಾವಣೆಗಳಲ್ಲಿ ಉತ್ಪನ್ನವಾಗುವ ಘನತ್ಯಾಜ್ಯಗಳನ್ನು ಹಸಿ ಕಸ, ಒಣ ಕಸ ಹಾಗೂ ಪ್ಲಾಸ್ಟಿಕ್‌ಗಳಾಗಿ ವಿಂಗಡಿಸಲು ಹಾಗೂ ಹಸಿ ಕಸವನ್ನು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಲು ಕ್ರಮ ವಹಿಸಲಾಗುವುದು.

**ಸಾರ್ವಜನಿಕ ಸಂಪರ್ಕಾಧಿಕಾರಿ**